




# ಮಾಯಮ್ಮಳೆಂಬ ದುಡ್ಡಿನ ದೇವತೆ

ಪಂಚಪೀಠಗಳಲ್ಲಿ ಒಂದಾದ ಉಜ್ಜಿನಿ ಪೀಠ ವಿಜಯನಗರ ಜಿಲ್ಲೆ ಕೊಟ್ಟೂರು ತಾಲ್ಲೂಕಿನಲ್ಲಿದೆ. ಈ ಉಜ್ಜಿನಿ ಸಮೀಪ ಬರುವುದು ಗಾಣಗಟ್ಟೆ ಗ್ರಾಮ. ಅಲ್ಲಿ ನೆಲೆಸಿರುವ ಮಾಯಮ್ಮ ದೇವಿಯ ನಡಾವಳಿ ಜೋರಾಗಿದೆ. ಈ ದೇವಿ ಹೂವು, ಆಭರಣಗಳಿಗಿಂತ ಹಣದ ಪ್ರಿಯೆ ಅಂತ ಇಲ್ಲಿನ ಭಕ್ತರು ನಂಬಿದ್ದಾರೆ. ಅದಕ್ಕಾಗಿ ಮಾಯಮ್ಮಳನ್ನು ದುಡ್ಡಿನ ದೇವರು ಅಂತಾನೇ ಭಕ್ತರು ಪ್ರೀತಿಯಿಂದ ಕರೆಯುತ್ತಾರೆ. ದೇವಿಗೆ ದಿನವೂ ನೋಟಿನ ಹಾರ ಮಾಡಿ ಹಾಕಲಾಗುತ್ತದೆ. ದಿನನಿತ್ಯ ದೂರದೂರಿಂದ ಇಲ್ಲಿಗೆ ಬರುವ ನೂರಾರು ಭಕ್ತರು, ದೇವಿ ದರ್ಶನ ಪಡೆದು ತಮ್ಮ ಕೋರಿಕೆಗಳನ್ನು ಸಲ್ಲಿಸುತ್ತಾರೆ. ಹಾಗೆ ಇಷ್ಟಾರ್ಥಗಳು ಈಡೇರಿದವರು ಅಂದುಕೊಂಡಷ್ಟು, ಇಲ್ಲವೆ ತಮ್ಮ ತಮ್ಮ ಶಕ್ತ್ಯಾನುಸಾರ ಹಣವನ್ನು ದೇವಿಗೆ ಮುಡಿಪಾಗಿ ಸಲ್ಲಿಸುತ್ತಾರೆ. ಹೀಗೆ ಕಾಣಿಕೆ ಸಲ್ಲಿಸುವಾಗಲೂ ಭಕ್ತರು ಕಲೆ ಮೆರೆಯುವುದು ವಿಶೇಷ. ನಾಣ್ಯ, ನೋಟುಗಳಿಂದ ತರಹೇವಾರಿ ಡಿಸೈನ್ ಮಾಡಿ ದೇಗುಲವನ್ನು ಅಲಂಕೃತಗೊಳಿಸುತ್ತಾರೆ. ಭಕ್ತರ ಈ ಕಲಾಪ್ರಜ್ಞೆ, ದೇವಿಗೆ, ದೇಗುಲಕ್ಕೆ ವಿಶೇಷ ಮೆರುಗು ನೀಡುತ್ತಿದೆ.

–ಸ್ವರೂಪ್ ಕೊಟ್ಟೂರು, ವಿಜಯನಗರ



# ದೋಸೆ ಅಣಬೆ

ಮಳೆಗಾಲ ಬರುತ್ತಿದ್ದ ಹಾಗೆ ನಾನಾ ವಿಧದ ಅಣಬೆಗಳು ಎಲ್ಲ ಕಡೆ ಹುಟ್ಟಿಕೊಳ್ಳುತ್ತವೆ. ಅದರಲ್ಲಿ ದೋಸೆ ಅಣಬೆಯೂ ಒಂದು. ಉಬ್ಬಿದ ದಪ್ಪ ದೋಸೆಯ ಹಾಗೆ ಕಾಣಿಸುವ ಈ ದೊಡ್ಡ ಅಣಬೆಯ ಸುತ್ತಲೂ ಚಿಕ್ಕ ಚಿಕ್ಕ ಒಂದೆರಡು ಅಣಬೆಗಳೂ ಇರುತ್ತವೆ. ದೋಸೆಯ ಕೆಳಗೆ ಅದನ್ನು ಹೊತ್ತ ಪುಟ್ಟ ಸ್ತಂಭವಿದೆ. ಇದು ಆಹಾರವಾಗಿ ಉಪಯೋಗವಾಗದಿದ್ದರೂ ನೋಡಲು ಸುಂದರವಾಗಿರುತ್ತದೆ. ಕರಗುತ್ತಾ ಹೋಗಿ ಎರಡು ದಿನಗಳಲ್ಲಿ ಅದರ ಜೀವಿತ ಮುಗಿಯುತ್ತದೆ.

–ಪ. ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ




# ವೃತ್ತಪತ್ರಿಕೆಗಳ ಗೂಡು

ಈಚೆಗೆ ಅಮೆರಿಕದ ಪ್ರವಾಸದಲ್ಲಿದ್ದಾಗ ಶಿಕಾಗೋ ನಗರದ ವೀಕ್ಷಣೆಗೆ ಹೋಗಿದ್ದೆವು. ಅಲ್ಲಿನ ಮಾರ್ಗವೊಂದರಲ್ಲಿ ಈ ಗೂಡು ನಮ್ಮೆಲ್ಲರ ಗಮನಸೆಳೆಯಿತು. ವೃತ್ತಪತ್ರಿಕೆಯವರು ವಿತರಣಾ ವೆಚ್ಚವನ್ನು ಕಡಿಮೆ ಮಾಡುವುದಕ್ಕಾಗಿ ಹಾಗೂ ಗ್ರಾಹಕರ ಅನುಕೂಲಕ್ಕಾಗಿ ರಸ್ತೆಯ ಬದಿಯಲ್ಲಿ ಈ ರೀತಿಯ ವ್ಯವಸ್ಥೆಯನ್ನು ಮಾಡಿಕೊಂಡಿದ್ದರು. ಓದುಗರು ತಮಗೆ ಬೇಕಾದ ವೃತ್ತಪತ್ರಿಕೆಯ ಮೊಬಲಗನ್ನು ಆ ಪತ್ರಿಕೆಯಿರುವ ಕಿಂಡಿಯಲ್ಲಿ ಹಾಕಿದಲ್ಲಿ ಯಾಂತ್ರಿಕವಾಗಿ ಪತ್ರಿಕೆಯ ಸ್ವಲ್ಪ ಭಾಗ ಹೊರಬರುತ್ತದೆ. ಆಗ ಅದನ್ನು ಎಳೆದು ತೆಗೆದುಕೊಳ್ಳಬೇಕಾಗಿತ್ತು.

ಆದರೆ, ಈಗ ಅಂತರ್ಜಾಲದ ಮಹಿಮೆಯಿಂದ ವೃತ್ತಪತ್ರಿಕೆಗಳಿಗೆ ಬೇಡಿಕೆ ಕಡಿಮೆಯಾಗಿದೆ. ಮುದ್ರಣದ ವೆಚ್ಚವೂ ಅಧಿಕವಾಗಿರುವುದರಿಂದ ಮುದ್ರಿತ ಪತ್ರಿಕೆಗಳ ಸಂಖ್ಯೆ ದಿನೇ ದಿನೇ ಕ್ಷೀಣಿಸುತ್ತಿದೆ. ಹೀಗಾಗಿ, ಈ ಗೂಡುಗಳೂ ನಿರುಪಯುಕ್ತವಾಗತೊಡಗಿವೆ ಎನ್ನುವುದು ಸತ್ಯದ ವಿಚಾರ.

–ಬಿ. ಸತ್ಯನಾರಾಯಣ ಅರಸ, ಅರೆಬೈಲು